

ವಿದುಷಿ ತಿರುಮಲೆ ಶಾರದಾ

# ಶ್ರುತಿ ಶೂನ್ಯವಾಗಿದೆ ನೆನಪು ಬಯಲಾಗಿದೆ

■ ಭಾರತೀ ಕಾಸರಗೋಡು

'ಶ್ರುತಿ' ಅವರ ಮನೆಯ ಹೆಸರು. ಆ ಮನೆ ಸದಾಕಾಲ ವಿದ್ಯಾರ್ಥಿಗಳ ಕಲರವ ತುಂಬಿಕೊಂಡ ಪುಟ್ಟ ಗುರುಕುಲ. ಬಾಗಿಲು ತೆರೆದೊಡನೆ ನಮಗೆದುರಾಗುತ್ತಿದ್ದುದು ಶಿಷ್ಯವಾತ್ಸಲ್ಯದ ತುಂಬು ನಗು! ಸ್ವರೂಪವೂ ಹಾಗೆಯೇ – ಫಳಫಳಿಸುವ ಓಲೆ ಮೂಗುತಿಗಳು, ಮಿದುವಾದ ರೇಶಿಮೆ ಸೀರೆ, ವಿದ್ಯೆಯ ವರ್ಚಸ್ಸು ತುಂಬಿದ ಸಿರಿವದನ.

ವೀಣಾಗಾನ ವಿಶಾರದೆ, ವಿದುಷಿ ತಿರುಮಲೆ ಶಾರದಾ ಅವರು. ಸಂಗೀತ ವಿಶ್ವವಿದ್ಯಾಲಯ ಕೊಡಮಾಡಿದ ಡಾಕ್ಟರೇಟ್ ಇತ್ತು; ಪ್ರೊಫೆಸರ್ ಪದವಿ ಅಂತೂ ಇದ್ದೇ ಇತ್ತು. ಇದಾವುದನ್ನೂ ಅವರು ಎಂದೂ ಅಂಟಿಸಿಕೊಳ್ಳಲಿಲ್ಲ.

ಡಾ. ವಿ. ದೊರೆಸ್ವಾಮಿ ಅಯ್ಯಂಗಾರ್ ಅವರ ಜೀವನ ಚರಿತ್ರೆ ಬರೆದ ಸಂದರ್ಭದಲ್ಲಿ ಅವರಲ್ಲಿಗೆ ನನ್ನನ್ನು ಕರಕೊಂಡು ಹೋಗಿ ಪರಿಚಯ ಮಾಡಿಸಿದವರೇ ಈ ನನ್ನ ಗುರುಗಳು. ಅದು 'ಸುಧಾ'ದಲ್ಲಿ ಧಾರಾವಾಹಿಯಾದಾಗ, 'ನನ್ನ ಶಿಷ್ಯೆ ಬರೆದದ್ದು' ಅನ್ನುವ ಹೆಮ್ಮೆ ಅವರಿಗೆ. ಆಮೇಲದು ಪುಸ್ತಕವಾಗಿ ಬಿಡುಗಡೆಯಾದಾಗ ನಮ್ಮೆಲ್ಲರನ್ನು ಕರೆದುಕೊಂಡು ಹೋಗಿ ಸಿಹಿ ಊಟ ಕೊಡಿಸಿ ಸಡಗರಿಸಿದ್ದರು!

ಸೆಪ್ಟೆಂಬರ್ 18 ನಮಗೆಲ್ಲ ಬಾಯಿಪಾಠ. ಅಂದು ಅವರ ಹುಟ್ಟುಹಬ್ಬ. ಅವರ ಮನೆಯಲ್ಲಿ ಗುಂಪುಗೂಡಿ ಅವರ ಸುತ್ತ ಕೂತು ಅವರೇ ಹೇಳಿಕೊಟ್ಟ ಕೃತಿಗಳನ್ನು ಅವರಿಗಾಗಿ ಹಾಡುತ್ತಿದ್ದೆವು. ಶಿಷ್ಯರ ಸಂಭ್ರಮ ಅವರ ಮುಖದಲ್ಲಿ ಆನಂದದ ರೂಪದಲ್ಲಿ ಹೊಳೆಯುತ್ತಿತ್ತು. ಅಂಥದೊಂದು ಸಂದರ್ಭದಲ್ಲಿ ಮನಸ್ಸು ತುಂಬಿ ಹೇಳಿದ್ದರು – 'ನನಗಾಗಿ ಬಿಡುವು ಮಾಡಿಕೊಂಡು ಬಂದಿರಿ. ಹಾಡಿದಿರಿ. ಸವಿಯೂಟವನ್ನು ನೀಡಿದಿರಿ. ಇಂಥ ಶಿಷ್ಯರು ಎಲ್ಲರಿಗೂ ಸಿಗಬಹುದೇ? ನಾನೆಷ್ಟು ಭಾಗ್ಯಶಾಲಿ!'.